ಆಗಿದೆ. ಕೋರ್ಟ್‌ಗೆ ಹೋದದ್ದು, ತಪ್ಪು ಯಾರದು ಎನ್ನುವುದನ್ನು ನಿರ್ಧಾರ ಮಾಡುವುದು ಒಂದು ಭಾಗ. ಭೂಮಿಯನ್ನು ಅಕ್ವಿಜಿಶನ್ ಮಾಡುವುದಕ್ಕೆ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗೆ ಅಧಿಕಾರವಿದೆ. ಜಿಲ್ಲಾಧಿಕಾರಿಗಳು ಮತ್ತು ಫಲಾನುಭವಿಗಳು ಕುಳಿತು ಏನು ತೀರ್ಮಾನ ಮಾಡಿರುತ್ತಾರೆ ಅದರ ವಿರುದ್ಧ ಕೋರ್ಟ್‌ನಲ್ಲಿ ಚರ್ಚೆ ಮಾಡುವುದಿಲ್ಲವೆಂದು ಒಪ್ಪಿಕೊಂಡು ಆಗಿದೆ, ಆಮೇಲೆ ಕೋರ್ಟ್‌ಗೆ ಹೋಗಿ ತೀರ್ಮಾನವಾಗದಿರತಕ್ಕ ಕೇಸುಗಳು ಸಹ ಇವೆ. ಆ ವಿವರಗಳನ್ನು ಬೇಕಾದರೆ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ :— ವಿಡಿಯೋ ಫ್ಯಾಕ್ಟರಿ ಮಾಡಿರುವ ಬಗ್ಗೆ ತನಿಖೆ ಆಗಲಿ.

ಅಧ್ಯಕ್ಷರು :— ನೋ ಡಿಸ್‌ಕಷನ್ಸ್. ನಿಯಮ 351ರ ಪ್ರಕಾರ ನೋಟೀಸ್ ಕೊಡಿ. ಮಾನ್ಯ ರಾಜುಗೌಡರು ತಾವು ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

(ಈ) ಹನೂರು ಕ್ಷೇತ್ರದ ಮಾರ್ಟಳ್ಳಿ ಗ್ರಾಮದ ಕೊಳಂದರಾಜು ಎಂಬುವರನ್ನು ಅಬಕಾರಿ ಗುತ್ತಿಗೆದಾರರ ಗೂಂಡಾಗಳು ರಾತ್ರಿಯಲ್ಲಿ ಮನೆನುಗ್ಗಿ ಕಣ್ಣುಗಳ ಮೇಲೆ ಹೊಡೆದು ಶಾಶ್ವತವಾದ ಅಂಧತ್ವ ಮಾಡಿರುವುದು.

ಶ್ರೀ ಜಿ. ರಾಜುಗೌಡ (ಹನೂರು) :— ಮಾನ್ಯ ಅಧ್ಯಕ್ಷರೆ, ನನ್ನ ಮತದಾರ ಕ್ಷೇತ್ರದಲ್ಲಿ ಮಾರ್ಟಳ್ಳಿ, ಗ್ರಾಮದ ಕೊಳಂದ ರಾಜನನ್ನು ಅಬಕಾರಿ ಗುತ್ತಿಗೆದಾರರ ಗೂಂಡಾಗಳು ರಾತ್ರಿಯಲ್ಲಿ ಅವರ ಮನೆಗೆ ನುಗ್ಗಿ, ಮನೆಯಿಂದ ಹೊರಗೆ ಎಳೆದುಕೊಂಡು ಹೋಗಿ ಕಣ್ಣುಗಳ ಮೇಲೆ ಹೊಡೆದು ಶಾಶ್ವತವಾದ ಅಂಧತ್ವವನ್ನು ಉಂಟು ಮಾಡಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಸಾರಾಯಿ ಮಾರಾಟ ಮಾಡಲು ಸರ್ಕಾರದವರು 66 ಗ್ರಾಮಗಳಿಗೆ ಮಾತ್ರ ಪರವಾನಗಿಯನ್ನು ಕೊಟ್ಟಿದ್ದಾರೆ. ಕಾಡುಗಳ್ಳ ವೀರಪ್ಪನ್‌ನ ಕಾರ್ಯಾಚರಣೆಯ ಪ್ರಯುಕ್ತ ಮಾರ್ಟಳ್ಳಿ ಪಂಚಾಯಿತಿ, ಗೋಪಿನಾಥಂ ಪಂಚಾಯಿತಿ, ಮಲೈ ಮಹದೇಶ್ವರ ಬೆಟ್ಟದ ಪಂಚಾಯಿತಿ, ಪೊನ್ನಾಜಿ ಪಂಚಾಯಿತಿ ಹೀಗೆ ಆರು ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸಾರಾಯಿ ಮಾರಾಟವನ್ನು ಸರ್ಕಾರ 1995ರಿಂದ ನಿಷೇಧ ಮಾಡಿದೆ. ಪರಿಸ್ಥಿತಿ ಹೀಗಿದ್ದರೂ 2000ದ ಜುಲೈ ಒಂದರಿಂದಲೇ ಆ ಪ್ರದೇಶದಲ್ಲಿ ರಾಜಾರೋಷವಾಗಿ ಅಬಕಾರಿ ಅಧಿಕಾರಿಗಳ, ಪೊಲೀಸ್ ಅಧಿಕಾರಿಗಳ ಕುಮ್ಮಕ್ಕಿನಿಂದ ಸಾರಾಯಿ ಮಾರಾಟ ಮಾಡುತ್ತಾ ಸರ್ಕಾರಿ ಆದೇಶಗಳನ್ನು ಉಲ್ಲಂಘನೆ ಮಾಡುತ್ತಿದ್ದು, ಕೇವಲ 30 ವರ್ಷ ವಯಸ್ಸಿನ ಕೃಷಿ ಕಾರ್ಮಿಕ ಕೊಳಂದರಾಜನನ್ನು ಶಾಶ್ವತವಾಗಿ ಕುರುಡನನ್ನಾಗಿ ಮಾಡಿ ಆತ ಮೈಸೂರು ಆಸ್ಪತ್ರೆಯಲ್ಲಿ ಇದ್ದಾನೆ. ಆತನ ಸಂಸಾರ ಹೊಟ್ಟಿಗಿಲ್ಲದೆ ಬೀದಿಪಾಲಾಗಿದೆ. ಇದರ ಬಗ್ಗೆ ತನಿಖೆ ಮಾಡಿಸಿ, ಸರ್ಕಾರದ ಆದೇಶವನ್ನು ಉಲ್ಲಂಘಿಸಿದವರಿಗೆ ಶಿಕ್ಷೆಮಾಡಿ ಕಣ್ಣು

ಕಳೆದುಕೊಂಡವರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯಮಂತ್ರಿ) :— ಇದರ ಬಗ್ಗೆ ಸಂಪೂರ್ಣ ಮಾಹಿತಿ ಈಗ ನನ್ನ ಹತ್ತಿರ ಇಲ್ಲ. ಅದನ್ನು ನಾನು ನಾಳೆ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು :— ಆಯಿತು, ಮುಂದೆ ಮಾನ್ಯ ಸುಬ್ಬಾರೆಡ್ಡಿಯವರು ಪ್ರಸ್ತಾಪ ಮಾಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡುವ ವಿಷಯ ಯಾವುದು ಎನ್ನುವುದು ನನಗೆ ಮರೆತುಹೋಗಿದೆ. ಏಕೆಂದರೆ...

(ಸದನದಲ್ಲಿ ನಗು)

ಅಧ್ಯಕ್ಷರು :— ತಾವು ಮೂರು-ನಾಲ್ಕು ಕಳಿಸಿದ್ದೀರಿ. ನಾನು ಓದಿ ಹೇಳುತ್ತೇನೆ. ಬೆಂಗಳೂರು ನಗರದ ವಿವಿಧ ಬಡಾವಣೆಗಳಲ್ಲಿ ಹಾಲಿ ಹಲವಾರು ಸರ್ಕಾರಿ ವಸತಿ ಗೃಹಗಳು ಖಾಲಿ ಇರುವುದರ ಬಗ್ಗೆ.

ಶ್ರೀ ಕೆ. ಶ್ರೀನಿವಾಸಗೌಡ :— ಇವರು ಕೋರ್ಟಿನಲ್ಲಿ ಕೂಡ ಇದೇ ತರಹ ಮರೆತು ಹೋಗುತ್ತಾರೇನು?

(ಸದನದಲ್ಲಿ ನಗು)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೇ, ಈಗ ಅನೇಕ ಬಡಾವಣೆಗಳಲ್ಲಿ ಸರ್ಕಾರದ...

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ಅವರು ಏನು ಕೇಳುತ್ತಾರೆ? ನಾವು ಯಾವುದಕ್ಕೆ ಉತ್ತರ ಕೊಡಬೇಕು?

ಅಧ್ಯಕ್ಷರು :— ನೀವು ಉತ್ತರ ಹೇಳಬೇಕಾಗಿಲ್ಲ...

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೇ, ನನಗೆ ಒಂದು ಸಮಸ್ಯೆ ಬಂದಿದೆ ಇವರು ಯಾವತ್ತಾದರೂ ಜಡ್ಜ್‌ರನ್ನು ಇವತ್ತು ನನ್ನದು ಯಾವ ಕೇಸ್ ಇದೆಯೆಂದು ಕೇಳಿಬಿಟ್ಟರೆ ಹೇಗೆ?

(ಗೊಂದಲ)

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ನಾನು ಕೊಟ್ಟು ಒಂದು ವಾರ ಆಯಿತು. ನಮಗೆ ಲಿಸ್ಟ್ ಕೂಡ ಬಂದಿಲ್ಲ.